**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2424/2022**

ಪಿ.ಡಬ್ಲ್ಯೂಃ **1**

ಸಿ.ಡಬ್ಲ್ಯೂಃ 1

| | | |
|---|---|---|
| ಹೆಸರು | ಃ | ಶಂಭುಲಿಂಗಯ್ಯ ಎಂ ಇ |
| ತಂದೆಯ ಹೆಸರು | ಃ | ಈರಯ್ಯ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಪಿ ಎಸ್ ಐ ಶಂಕರನಾರಾಯಣ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಉಡುಪಿ |

ಸಾಕ್ಷಿಯು ವೀಡಿಯೋ ಕಾನ್ಫರೆನ್ಸ್ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

**ದಿನಾಂಕಃ 06-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ಈ ದಿನ ನ್ಯಾಯಾಲಯದಲ್ಲಿ ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಿದ್ದು, ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿಃ **19-01-2022** ರಿಂದ **20-01-2023** ರತನಕ ನಾನು ಲಕ್ಕವಳ್ಳಿ **ಪೊಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 05-04-2022 ರಂದು 12-00 ಗಂಟೆ ಸಮಯದಲ್ಲಿ ನಾನು ಸಿಬ್ಬಂಧಿಗಳಾದ ಚಾಸಾ-4 ಮತ್ತು 5 ರವರೊಂದಿಗೆ ಇಲಾಖಾ ಜೀಪ್ ನಂ.ಕೆಎ 18 ಜಿ 789 ರಲ್ಲಿ ರಂಗೇನಹಳ್ಳಿ ಕಡೆಯ ಗಸ್ತಿನಲ್ಲಿರುವಾಗ ರಂಗೇನಹಳ್ಳಿಯಿಂದ ಬರಗೇನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಪ್ಯಾಸೆಜರ್ ಆಟೋದಲ್ಲಿ ದನದ ಮಾಂಸವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ನಂತರ ನಾನು ಈ ವಿಚಾರವನ್ನು ಸಿಬ್ಬಂಧಿಗಳಿಗೆ ತಿಳಿಸಿ, ರಂಗೇನಹಳ್ಳಿ ಬಸ್ ನಿಲ್ದಾಣದ ಬಳಿ 12-05 ಗಂಟೆಗೆ ಹೋಗಿ ಅಲ್ಲಿ ನಿಂತಿದ್ದ ಪಂಚರಾದ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ, ಧಾಳಿ ಮಾಡಲು ಹೊರಟಿದ್ದು, ನಮಗ ಸಹಕರಿಸಬೇಕಾಗಿ ಕೇಳಿಕೊಂಡಿದ್ದು, ಅವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸ್ ಜಾರಿ ಮಾಡಿ, ಅವರ ಸಹಿಯನ್ನು ಪಡೆದುಕೊಂಡು, ನಂತರ ಅವರನ್ನು ಸಹ ಇಲಾಖಾ

ಜೀಪಿನಲ್ಲಿ ಕೂರಿಸಿಕೊಂಡು ನಮಗೆ ಮಾಹಿತಿ ಬಂದ ಸ್ಥಳವಾದ ಬರಗೇನಹಳ್ಳಿ ರಸ್ತೆಯ ಕಡೆ, ಶೇಖರ್ ರವರ ಮನೆಯ ಬಳಿ, ಸುಮಾರು 12-30 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ಕೆಎ 14 ಸಿ 2674 ನಂಬರಿನ ಕಪ್ಪು ಬಣ್ಣದ ಪ್ಯಾಸೇಜನರ್ ಆಟೋ ಹೋಗುತ್ತಿದ್ದು, ಅದನ್ನು ತಡೆದು ಪಂಚರ ಸಮಕ್ಷಮ ಪರಿಶೀಲಿಸಿ ನೋಡದಲಾಗಿ ಅದರಲ್ಲಿ ಎರಡು ಪ್ಲಾಸ್ಟಿಕ್ ಚೀಲಗಳಲ್ಲಿ ದನದ ಮಾಂಸ ಇದ್ದು, ಅದನ್ನು ಪ್ಲಾಸ್ಟಿಕ್ ಕವರಿನಲ್ಲಿ ಪ್ಯಾಕ್ ಮಾಡಲಾಗಿದ್ದು, ಪಂಚರುಗಳು ಇದನ್ನು ದನದ ಮಾಂಸ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲಿಯೇ ಇದ್ದ ಆಟೋ ಚಾಲಕನ ಹೆಸರು, ವಿಳಾಸ ಕೇಳಲಾಗಿ ಅಜ್ಗರ್ ಪಾಷ ಬಿನ್ ಅಬ್ದುಲ್ ಜಲೀಲ್, ಯಾವುದೇ ಪರವಾನಗಿ ಇಲ್ಲದೇ ದನದ ಮಾಂಸವನ್ನು ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ. ಸ್ಥಳಕ್ಕೆ ತೂಕ ಮಾಡುವ ಸ್ಕೇಲ್ ನ್ನು ತಂದು ತೂಕ ಮಾಡಿದಾಗ ಸುಮಾರು 16 ಕೆಜಿ ದನದ ಮಾಂಸ ಇದ್ದು, ಅದರ ಬೆಲೆ ಸುಮಾರು 3,200/- ರೂಗಳು ಆಗಬಹುದೆಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಆಟೋದಲ್ಲಿ ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದರಿಂದ, ಆಟೋ ಹಾಗೂ ದನದ ಮಾಂಸವನ್ನು 12.30 ರಿಂದ 1-30 ಗಂಟೆಯವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು, ಮಹಜರ್ ವೇಳೆಯಲ್ಲಿ ಪಂಚರ ಸಮಕ್ಷಮ ಮಾಂಸದ ಬಗ್ಗೆ ವರದಿ ಪಡೆಯಲು ಸ್ಯಾಂಪಲ್ 200 ಗ್ರಾಂನಷ್ಟು ಮಾಂಸವನ್ನು ಪ್ಲಾಸ್ಟಿಕ್ ಡಬ್ಬಿಯಲ್ಲಿ ಸಂಗ್ರಹಿಸಿ, ಅದನ್ನು ಸೀಲು ಮಾಡಿ, ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಸ್ವತ್ತುಗಳನ್ನು ಮತ್ತು ಆರೋಪಿಯನ್ನು ವಶಪಡಿಸಿಕೊಂಡು 1-45 ಗಂಟೆಗೆ ಠಾಣೆಗೆ ಬಂದು ಆರೋಪಿಯ ವಿರುದ್ದ ಪ್ರಕರಣ ದಾಖಲಿಸುವಂತೆ ವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಲು ಚಾಸಾ-10 ರವರಿಗೆ ವರದಿ ಮತ್ತು ಮಾಲನ್ನು ನೀಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಪೋಟೋವನ್ನು ತೆಗೆದಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಛಾಯಚಿತ್ರದಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

ಸಾಕ್ಷಿಗೆ ಮತ್ತೊಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯುು ಸದರಿ ಛಾಯಚಿತ್ರದಲ್ಲಿ ಆರೋಪಿ ಮತ್ತು ಪಂಚರ ಇರುವಿಕೆಯನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ ಎಎ **ವಕೀಲರಿಂದ.**

ಈ ಪ್ರಕರಣದ ಸಲುವಾಗಿ ನನಗೆ ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಮಾಹಿತಿ ಬಂದಿರುತ್ತದೆಂದರೆ ಸರಿ. ಈ ಪ್ರಕರಣದ ಸಲುವಾಗಿ ಪಂಚರಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆಂದರೆ ಸರಿ. ಈ ಪ್ರಕರಣಕ್ಕೆ ಒಳಪಟ್ಟ ಆಟೋವಿನ ಮಾಲೀಕರ ಹೆಸರು ಮುಂದಿನ ಅಧಿಕಾರಿಗಳು ತಿಳಿದುಕೊಂಡಿರುತ್ತಾರೆ. ಅಮಾನತ್ತುಪಡಿಸಿಕೊಂಡ ದನದ ಮಾಂಸವು ಎಲ್ಲಿಂದ ತರುತ್ತಿದ್ದಾರೆಯೋ, ಸದರಿ ಜಾಗವನ್ನು ನಾನು ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ದನದ ಮಾಂಸವನ್ನು ಯಾವ ಜಾಗದಿಂದ ತಂದಿರುತ್ತಾರೆಂದು ಮತ್ತು ಆ ಜಾಗದ ಮಹಜರ್ ಕ್ರಮವನ್ನು ನಾನು ಜರುಗಿಸಿಲ್ಲ ಎಂದರೆ ಸರಿ. ಮತ್ತು ಸದರಿ ಮಾಂಸವನ್ನು ತಂದ ಜಾಗದಿಂದ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನೀವು ಯಾವುದೇ ಧಾಳಿಯನ್ನು ಮಾಡಿರುವುದಿಲ್ಲ, ಯಾವುದೇ ದನದ ಮಾಂಸವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ,

ಸ್ಥಳದಲ್ಲಿ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣಾ ಅಂಕಿಅಂಶಗಳಿಗೋಸ್ಕರ ಮೇಲೆ ಆರೋಪಿಯ ಮೇಲೆ ಸುಳ್ಳು ವರದಿಯನ್ನು ತಯಾರಿಸಿ ಸುಳ್ಳು ಪ್ರಕಣವನ್ನು ತಯಾರಿಸಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಅವರ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**